**<u>ದಿನಾಂಕಃ 12.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ.ಪಿ.ಕೆ.ವಿ. ವಕೀಲರಿಂದಃ</u>**

1) ನಾನು 10ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದ ಪತ್ರದ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. 1ನೇ ವಾದಿಯ ಗಂಡ, 2 ಮತ್ತು 3ನೇ ವಾದಿಗಳ ತಂದೆ ಸಿ.ಕುಮಾರ್ ರವರು ದಿಃ26.07.1983 ರಂದು ಮಂಗಳವಾರಪೇಟೆ ಗ್ರಾಮದಲ್ಲಿ ಸ.ನಂ.383 ರಲ್ಲಿ 13.02 ಗುಂಟೆ ಸ್ವತ್ತನ್ನು ಖರೀದಿ ಮಾಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ.

2) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 7ನೇ ಕಂಡಿಕೆಯಲ್ಲಿ ಹೆಸರಿಸಿರುವ ಸಾಕಮ್ಮ, ಶಾಂತಮ್ಮ ಮತ್ತು ಜೋಗಪ್ಪ ರವರು ಸ.ನಂ.383/18 ರಲ್ಲಿ ಒಟ್ಟು 6.08 ಗುಂಟೆ ಸ್ವತ್ತಿನಲ್ಲಿ ಇರುತ್ತಾರೆ ಎಂದರೆ ಸರಿ. ಸದರಿಯವರು ವಾದಿಗಳ ಸಂಬಂಧಿಕರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ 1983 ರಲ್ಲಿ ದಾವ ಸ್ವತ್ತಿಗೆ ಸಂಬಂಧಿಸಿದಂತೆ 1ನೇ ವಾದಿಯ ಗಂಡನ ಹೆಸರಿಗೆ ಬರೆದುಕೊಟ್ಟಿರುವ ನಿಪಿ.1 ರ ಕ್ರಯ ಪತ್ರದ ಊರ್ಜಿತತೆಯನ್ನು ಈ ಹಿಂದೆ ನಾವು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳು ಆ ಸ್ವತ್ತನ್ನು ಖರೀದಿ ಮಾಡಿದ ದಿನದಿಂದಲೂ ಸ್ವಾಧೀನ ಹೊಂದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

3) ದಾವ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನ ಹೊಂದಿದ್ದರು ಸಹ ನಾವು ಕಂದಾಯ ಅಧಿಕಾರಗಳ ಜೊತೆ ಶಾಮೀಲಾಗಿ ಸ್ವತ್ತಿನ ಪಹಣಿಯನ್ನು ನಮ್ಮ ಹೆಸರಿಗೆ ದಾಖಲು

ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಕಂದಾಯ ದಾಖಲೆಗಳು ಕಂದಾಯ ಅಧಿಕಾರಗಳ ಜೊತೆ ಶಾಮೀಲಾಗಿ ಸೃಷ್ಟಿಸಿರುವ ದಾಖಲೆಗಳು ಆಗಿವೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಮೌಲ್ಯ ಹೆಚ್ಚಾಗಿ ಇರುವ ಕಾರಣ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 11ನೇ ಕಂಡಿಕೆಯಲ್ಲಿ ತಿಳಿಸಿದಂತೆ 1ನೇ ವಾದಿಯ ಗಂಡ ದಾವಾ ಸ್ವತ್ತನ್ನು ನನ್ನ ತಂದೆಯಿಂದ ಖರೀದಿ ಮಾಡಿದ ನಂತರ ವಾದಿಗಳು ಅದನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸ.ನಂ.383/4 ರಲ್ಲಿ 1 ಎಕರೆ 4 ಗುಂಟೆ ಸ್ವತ್ತಿನಲ್ಲಿ ಮಾತ್ರ ನಾನು ಸ್ವಾಧೀನದಲ್ಲಿ ಇದ್ದು ಉಳಿದ ವಿಸ್ತೀರ್ಣದಲ್ಲಿ ವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ವಾದಿಗಳಿಗೆ ಸೇರಿದ ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುವ 6 ವರೆ ಗುಂಟೆ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನದಲ್ಲಿ ಇದ್ದು ಇನ್ನುಳಿದ ವಿಸ್ತೀರ್ಣದಲ್ಲಿ ತಾನು ಇರುವುದಾಗಿ ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**